# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ ಹೆಚ್ಚುವರಿ ಗುರಿ ನೀಡುವ ಬಗ್ಗೆ

**ಓದಲಾಗಿದೆ:**

ಸರ್ಕಾರದ ಆದೇಶ ಸಂಖ್ಯೆ:ವಇ 39 ಹೆಚ್‌ಎಹೆಚ್ 2013, ದಿನಾಂಕ:25.05.2013

**ಪ್ರಸ್ತಾವನೆ:**

ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರವು ನಗರ ವಸತಿ ಯೋಜನೆಯಡಿ 2013–14ನೇ ಸಾಲಿಗೆ 20,000 ಮನೆಗಳ ಗುರಿಯನ್ನು ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಈ ಗುರಿಗೆ ಸರ್ಕಾರದ ಸಹಾಯಧನ ಪ್ರತಿ ಮನೆಗೆ ರೂ1.20ಲಕ್ಷಗಳನ್ನು ನೀಡಲಾಗುತ್ತಿದೆ.

ಕೆಲವು ಶಾಸಕರು ಹಾಗೂ ಸಚಿವರ ಕೋರಿಕೆ ಮೇರೆಗೆ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ 2013–14ನೇ ಸಾಲಿಗೆ ಹೆಚ್ಚುವರಿ ಗುರಿಯನ್ನು ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ವಇ 27 ಹೆಚ್‌ಎಹೆಚ್ 2014(ಪಿ–2), ಬೆಂಗಳೂರು, ದಿನಾಂಕ: 05.06.2014**

ಸರ್ಕಾರವು 2013–14ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ ಈಗಾಗಲೇ ನೀಡಿರುವ ಗುರಿಯ ಜೊತೆಗೆ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಿಗೆ 2013–14ನೇ ಸಾಲಿಗೆ ಹೆಚ್ಚುವರಿ ಮನೆಗಳ ಗುರಿಯನ್ನು ಮಂಜೂರು ಮಾಡಿದೆ. ಈ ಹೆಚ್ಚುವರಿ ಮನೆಗಳ ಗುರಿಗೆ ಸರ್ಕಾರದ ಸಹಾಯಧನ ರೂ.1.20ಲಕ್ಷವಾಗಿರುತ್ತದೆ. ಇದಕ್ಕೆ ತಗಲುವ ವೆಚ್ಚವನ್ನು ವಾಜಪೇಯಿ ನಗರ ವಸತಿ ಯೋಜನೆಯಡಿ ಒದಗಿಸಲಾಗುವ ಅನುದಾನದಲ್ಲಿ ಭರಿಸತಕ್ಕದ್ದು.

| ಕ್ರಸಂ | ವಿಧಾನಸಭಾ ಕ್ಷೇತ್ರ | ಮಂಜೂರು ಮಾಡಲಾದ ಹೆಚ್ಚುವರಿ ಮನೆಗಳ ಸಂಖ್ಯೆ |
|---|---|---|
| 01 | ವಿಜಾಪುರ ನಗರ | 500 |
| 02 | ಬಳ್ಳಾರಿ ನಗರ | 500 |

ಹೆಚ್ಚುವರಿಯಾಗಿ ನೀಡಿರುವ ಗುರಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಜಿ.ಶಂಕರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಸತಿ ಇಲಾಖೆ(ವಸತಿ–2)

**ಇವರಿಗೆ:**

01. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
02. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
03. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು
04. ಜಿಲ್ಲಾಧಿಕಾರಿ, ವಿಜಾಪುರ/ಬಳ್ಳಾರಿ ಜಿಲ್ಲೆ.
05. ಸಂಬಂಧಪಟ್ಟ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ – ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಮುಖಾಂತರ.
06. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
07. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು